ಪದ್ಯಗಳನ್ನು ಜಂಪೆ, ಏಕತಾಳ, ಯಾಲಪದ, ತ್ರಿಪುಡೆ... ಹೀಗೆ ಆ ಕಥೆಗೆ ಅವಶ್ಯಕತೆಯಿರುವ ಎಲ್ಲ ರಾಗಗಳಲ್ಲಿ ಹಾಡುವುದನ್ನು ಕಲಿಸಿದ್ದ. ಗಂಗಿರೆಡ್ಡಿ ಪದ್ಯಗಳನ್ನು ರಾಗವಾಗಿ ಹಾಡುವ ಬಗೆ ಮತ್ತು ಗಂಗರಾಜು ಅದನ್ನು ವ್ಯಾಖ್ಯಾನಿಸುವ ಬಗೆ ಬಹಳ ಬೇಗನೆ ಸುತ್ತಮುತ್ತಲ ಊರುಗಳಲ್ಲಿ ಹಬ್ಬಿ ಪ್ರಸಿದ್ಧಿಯೂ ಸಿಕ್ಕಿಬಿಟ್ಟಿತ್ತು. ಆಗಿನಿಂದ ಅವರದು 'ಗಂಗಜೋಡಿ' ಎಂದೇ ಹೆಸರಾಗತೊಡಗಿತು. ಶನಿ ಕಥೆಯಲ್ಲದೆ ಗಂಗಜೋಡಿಯನ್ನು ಊರ ದೇವಸ್ಥಾನದ ಮುಂದೆ ಸತ್ಯವ್ರತನ ಕಥೆ, ಹರಿಶ್ಚಂದ್ರನ ಕಥೆ, ಸಾಸುಲ ಚಿನ್ನಮ್ಮನ ಕಥೆ, ಬಾಲ ನಾಗಮ್ಮ ಕಥೆ... ಹೀಗೆ ಇತರೆ ಕಥೆಗಳನ್ನೂ ಹೇಳಲು ಕರೆಸುತ್ತಿದ್ದರು. ಮೊದಲಿಗೆ ಏನೂ ತೆಗೆದುಕೊಳ್ಳದೆ ಕಥೆ ಹೇಳುತ್ತಿದ್ದ ಗಂಗಜೋಡಿ ಪ್ರಸಿದ್ಧಿ ಹೆಚ್ಚಿದಂತೆಲ್ಲಾ ದವಸ ಧಾನ್ಯ, ತದನಂತರದಲ್ಲಿ ಹಣವನ್ನೂ ನಿಗದಿಪಡಿಸಿ ಪಡೆದುಕೊಳ್ಳಲು ಶುರುವಿಟ್ಟುಕೊಂಡರು. ಕಾಲ ಕಳೆದಂತೆ ಕ್ರಮೇಣ ಕಥೆ ಕೇಳುವವರು ಕಮ್ಮಿಯಾಗಿ ಕಥೆ ಮಾಡಿಸಲು ಕರೆಯುವುದೂ ಕಮ್ಮಿಯಾಗತೊಡಗಿತು. ಕಾಲದ ಮಹಿಮೆಯ ನಡುವಿನಲ್ಲಿ ಶನಿದೇವನ ಕಥೆಯ ಮಹಿಮೆಯನ್ನೂ ಉಳಿಸಿಕೊಳ್ಳಬೇಕಾದ ತುರ್ತಿನ ದೆಸೆಯಿಂದ ಮತ್ತೆ ಒಂದು ಬಿಡಿಗಾಸನ್ನೂ ತೆಗೆದುಕೊಳ್ಳದೆ ಕಥೆ ಹೇಳುವುದೆಂದು ತೀರ್ಮಾನಿಸಿದರೂ ಅಂತಹ ಬದಲಾವಣೆಯೇನೂ ಕಂಡುಬರಲಿಲ್ಲ. ಹೀಗೇ ಒಂದಷ್ಟು ವರ್ಷಗಳ ಕಾಲ ಅಲ್ಲೊಂದು ಇಲ್ಲೊಂದು ಎಂಬಂತೆ ನಡೆಯುತ್ತಲಿತ್ತು.

ಹತ್ತು ವರ್ಷಗಳ ಹಿಂದೆ ಗಂಗರಾಜು ತೀರಿಕೊಂಡ ಮೇಲೆ ಗಂಗಿರೆಡ್ಡಿಗೆ ತನ್ನ ಅರ್ಧ ಆತ್ಮವೇ ಕಳಚಿಕೊಂಡು ಮರೆಯಾಯಿತೇನೋ ಎಂಬಷ್ಟು ಸೊರಗಿ ಹೋಗಿದ್ದ. ಜೊತೆಗೆ ಕಂಕಣಬಲ ಕೂಡಿಬರದ ಕಾರಣವಾಗಿ ಮತ್ತಷ್ಟು ಸೊರಗಿದ. ಗಂಗರಾಜು ತೀರಿಕೊಂಡ ಹೊಸದರಲ್ಲಿ ಗಂಗಿರೆಡ್ಡಿ ಪಾರಾಯಣ ಮತ್ತು ವ್ಯಾಖ್ಯಾನ ಎರಡನ್ನೂ ತಾನೊಬ್ಬನೇ ಮಾಡುವುದಾಗಿ ಘೋಷಿಸಿ ಒಂದೆರಡು ಕಡೆ ಎರಡನ್ನೂ ನಿಭಾಯಿಸಿ ದಣಿದಿದ್ದ. ದಣಿವಾದರೂ ಪರವಾಗಿಲ್ಲ ಎಂದು ಕಥೆ ಮಾಡಿಸುವವರಿಗಾಗಿ ಕಾಯತೊಡಗಿದ. ಕಾಯುವುದು ಹಿಂಸೆಯೆನಿಸಿ ಮೇಲ್ವರ್ಗದ ಮನೆಗಳವರೇ ಯಾಕೆ ಶನಿಮಹಾತ್ಮೆ ಕಥೆಯನ್ನು ಮಾಡಿಸಬೇಕು, ಕೆಳವರ್ಗದವರೂ ಮಾಡಬೇಕು, ಆಗಲೆ ಸಮಾನತೆ ಸಾಧ್ಯವಾಗುವುದು ಎಂಬ ವಾದವನ್ನು ಮುಂದಿಟ್ಟುಕೊಂಡು ಅಲೆಯತೊಡಗಿದ. ಹೀಗೆ ಶುರುವಿನಲ್ಲಿ ಒಂದಷ್ಟು ಯಶಸ್ಸನ್ನೂ ಕಂಡಿದ್ದಾಯಿತು. ತಾನು ಗೆದ್ದೆ ಎಂದುಕೊಳ್ಳುವಷ್ಟರಲ್ಲೆ ಮತ್ತೆ ವರ್ಷಗಟ್ಟಲೆ ಕಥೆ ಮಾಡಿಸುವವರೆ ಸಿಗದಾಗಿ, ಹಳ್ಳಿಗಳೊಳಗೆ ದೆವ್ವ ಬಂದು ಕೂತಿದೆ, ಅದು ಹೋಗಬೇಕೆಂದರೆ ತಾನು ಹಾಡುತ್ತಲೇ ಇರಬೇಕು ಎಂದು ತೀರ್ಮಾನಿಸಿದವನಂತೆ ನಡೆಯುವಾಗ, ಕೂತಾಗ, ಬಯಲಿಗೆ ಹೋದಾಗ... ಹೀಗೆ ಎಲ್ಲಕಡೆಯೂ ಶನಿಮಹಾತ್ಮೆ ಕಥೆಯ ಪದ್ಯಗಳನ್ನು ಹಾಡುವುದು ಉಸಿರಾಡುವಷ್ಟೆ ಸಹಜ ಎಂಬಂತೆ ಪಾಲಿಸಿಕೊಂಡು ಬಂದಿದ್ದಾನೆ.

ಗಂಗಿರೆಡ್ಡಿ 'ಕೇಳು ವಿಕ್ರಮ ಶನಿಯ ಮಹಿಮೆಯು/ ಪೇಳುವೆನು ಮನವಿಟ್ಟು ಲಾಲಿಸು...' ಎಂದು ಹಾಡುತ್ತಾ ಮನೆಯೊಳಗೆ ಕಾಲಿಟ್ಟ. ಅವನು ಹಾಗೆ ಹಾಡುತ್ತಾ ಒಳಹೋಗುವುದಕ್ಕೂ ಅತ್ತಿಗೆ 'ಅಲ್ಲೇ ಇಟ್ಟದ್ದೆ ಕಾಣ್ತಾ ಇಲ್ಲ' ಎನ್ನುವುದಕ್ಕೂ ಸರಿಯಾಗಿ ತಾಳೆಯಾಗಿ ಅವನು ತಕ್ಷಣವೆ ಹಾಡುವುದನ್ನು ನಿಲ್ಲಿಸಿದ. ಅಣ್ಣ ಅತ್ತಿಗೆಯರ ಮುಖಚಹರೆಯನ್ನು ಗಮನಿಸಿದವನಿಗೆ ಏನೋ ಅವಘಡ ಸಂಭವಿಸಿರಬಹುದು ಎಂದನಿಸಿತು. ಗಂಗಿರೆಡ್ಡಿಯ ಮುಖದ ಕಡೆಗೆ ಒಂದುಕ್ಷಣ ದಿಟ್ಟಿಸಿದ ಅವನ ಅಣ್ಣ ದೇವರೆಡ್ಡಿ 'ಲೇ ಗಂಗ, ಅಲ್ಲಿ ಆ ಟೀಪಾಯಿ ಮೇಕೆ ಇವಳು ಎರಡೆಳೆ ಸರ ಇಟ್ಟಿದ್ದಳಂತೆ ನೋಡಿದಿಯೋನೋ?' ಎಂದು ಕೇಳಿದ. ಗಂಗಿರೆಡ್ಡಿಗೆ ನಿಂತಲ್ಲಿಯೇ ಕುಸಿಯುತ್ತಿದ್ದೇನೆ ಎಂದನಿಸಿತು. ಮತ್ತೆ ಅತ್ತಿಗೆ 'ತಕೊಂಡಿದ್ರೆ ಕೊಟ್ಟಿಡೋ... ನೆಕ್ಸ್ಟ್ ದಪ ನಿಂಕೂ ಒಂದು ಕೈಗೋ ಕತ್ತಿಗೋ ಮಾಡಿಸಿದ್ರಾಯ್ತು. ನಿನ್ನಣ್ಣನುಕೆ ಅವನ್ನೂ ಏನಾರ ಬಂಗಾರದ್ದು ಮಾಡ್ಸು ಅಂತ ಪಲುಕಿ ಪಲುಕಿ ಸಾಕಾಯ್ತು. ನಿಂಕೂ ಬಂಗಾರ್ದ ಮೇಕೆ ಬ್ಯಮೆ ಇರುತ್ತೆ ತಾನೆ! ತಕೊಂಡಿದ್ರೆ ಕೊಟ್ಟಿಡೋ' ಎಂದು ನುಡಿದಳು.

ಯಾಕೋ ಗಂಗಿರೆಡ್ಡಿಗೆ ತಲೆ ತಿರುಗಿದ ಹಾಗಾಯ್ತು. ಜೋಲಿ ತಪ್ಪಿದವನಂತೆ ಗೋಡೆಯನ್ನು ಹಿಡಿದುಕೊಂಡ. ತಕ್ಷಣಕ್ಕೆ ಅವನಿಗೆ ಶನಿಮಹಾತ್ಮೆ ಕಥೆಯಲ್ಲಿ ವಿಕ್ರಮರಾಜನ ಮೇಲೆ ಕಳ್ಳತನದ ಆರೋಪ ಬರುವ ಸನ್ನಿವೇಶ ನೆನಪಾಗತೊಡಗಿತು. ವಿಕ್ರಮರಾಜನು ನಂದಿಶೆಟ್ಟಿಯ ಮಗಳಾದ ಅಲೋಲಿಕೆಯ ಜೊತೆ ಅವಳ ಚಿತ್ರಶಾಲೆಯ ಮಂಚದಲ್ಲಿ ಮಲಗಿರುವುದು. ಅಲೋಲಿಕೆ